**MVC No. 489/2023**
**RW-2**

**ದಿನಾಂಕ 8.7.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಎದುರುದಾರ ನಂ. 2 ರವರ ಪರ ಶ್ರೀ. ಎಸ್.ಬಿ.ಎಮ್. ವಕೀಲರಿಂದ:**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ನಾನೇ ಹೇಳಿ ಬರೆಸಿದ್ದು, ಅವು ಸತ್ಯ ಇರುತ್ತವೆ ಎಂದು ಪ್ರಮಾಣ ಮಾಡುತ್ತೇನೆ.

ನನ್ನ ಮೂಲ ಆಧಾರ ಕಾರ್ಡ ಹಾಜರುಪಡಿಸಿದ್ದು, ಅದನ್ನು ನಿ.ಆರ್.2 ಎಂದು ಗುರುತಿಸಲಾಯಿತು.

ನನ್ನ ಮೂಲ ಡಿ.ಎಲ್. ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್.-3 ಎಂದು ಗುರುತಿಸಲಾಯಿತು.

ಮಿಮಾ ಪ್ರತಿಯ ಜೆರಾಕ್ಸ ಪ್ರತಿಯನ್ನು ಹಾಜರುಪಡಿಸಿರುತ್ತೇನೆ.

**ಪಾಟೀ ಸವಾಲು ಎದುರುದಾರ ನಂ. 2 ರ ಪರ ಪಿ.ವಿ. ಎಮ್. ವಕೀಲರಿಂದಃ**

ನಾನು 6 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಅಪಘಾತ ದಿನ ನನ್ನ ವಾಹನವನ್ನು ನಾನೆ ಚಾಲಾಯಿಸುತ್ತಿದ್ದೆ. ಅಪಘಾತದ ದಿನ ನನ್ನ ವಾಹನದ ಮೇಲೆ ಇಬ್ಬರು ಪ್ರಯಾಣಿಸುತ್ತಿದ್ದೆವು. ಪ್ರಶಾಂತ ವಿಠ್ಠಲರಾವರವರು ನನಗೆ ಗೊತ್ತಿಲ್ಲ. ಆದಿನ ನಾನು ಮನ್ನೇಕಹಳ್ಳಿಯಿಂದ ಧರ್ಮಾಬಾದಗೆ ಹೋಗುತ್ತಿದ್ದೆ. ಆ ದಿನ ನಾನು ನನ್ನ ವಾಹನವನ್ನು 60-70 ಕಿ.ಮಿ. ಪ್ರತಿಗಂಟೆಗೆ ವೇಗದಲ್ಲಿ ಓಡಿಸುತ್ತಿದ್ದೇ ಎಂದರೆ ಸರಿಯಲ್ಲ, ಸಾಕ್ಷಿಯು 50-55 ಕಿ.ಮಿ. ವೇಗದಲ್ಲಿ ಒಡಿಸುತ್ತಿದ್ದೆ ಎಂದು ನುಡಿಯುತ್ತಾರೆ. ಅಪಘಾತದಲ್ಲಿ ನನಗೂ ಕೂಡ ಗಾಯಗಳಾಗಿದ್ದವು. ನನ್ನ ಮೇಲೆ ದಾಖಲಾದ ಕ್ರಿಮಿನಲ್ ಕೇಸನಲ್ಲಿ ನಾನು ಜಾಮೀನು ಪಡೆದು ಕೇಸ ನಡೆಸುತ್ತಿದ್ದೇನೆ. ನನ್ನ ಮೋಟರ ಸೈಕಲ್ ಎದುರಿಗೆ ಮೋಟರ ಸೈಕಲ ನಂ. ಕೆ.ಎ.38 ಎಕ್ಸ 9434 ವಾಹನ

ಹೊರಟಿತ್ತು ಎಂದರೆ ಸರಿಯಲ್ಲ ಸಾಕ್ಷಿಯು ಅದು ರಸ್ತೆಯ ತಪ್ಪು ಬದಿಗೆ ಒಮ್ಮೆಲೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಅಪಘಾತದ ದಿನ ನನ್ನ ಮುಂದೆ ಹೊರಟಿದ್ದ ವಾಹನ ಒಮ್ಮೆಲೆ ಬ್ರೇಕ ಹಾಕಿದ್ದರಿಂದ ನಾನು ನನ್ನ ವಾಹನಕ್ಕೆ ಬ್ರೇಕ ಹಾಕಿದ್ದರಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ವಾಹನ ಮತ್ತು  ಮೋಟರ ಸೈಕಲ ನಂ. ಕೆ.ಎ.38 ಎಕ್ಸ 9434 ಗಳು ಒಂದಕ್ಕೊಂದು ಸ್ಪರ್ಷ ಆಗಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತ ಕೇವಲ ನನ್ನ ಒಬ್ಬನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಅಪಘಾತ ನಡೆದ ರಸ್ತೆಯು 30-40 ಅಡಿ ಅಗಲ ಮತ್ತು ಉದ್ದದ ರಸ್ತೆ ಇತ್ತು ಎಂದರೆ ಸಾಕ್ಷಿಯು ಅಂದಾಜು 30 ಅಡಿ ಅಗಲ ಇತ್ತು ಎನ್ನುತ್ತಾರೆ. ಆ ದಿನ 100 ಮೀಟರ ಅಡಿ ದೂರದಿಂದ ನನ್ನ ಮುಂದೆ ಬರುತ್ತಿದ್ದ  ಮೋಟರ ಸೈಕಲ ನಂ. ಕೆ.ಎ.38 ಎಕ್ಸ 9434 ನೇದ್ದನು ನೋಡಿದ್ದೇನೆ ಎಂದರೆ ಸರಿಯಲ್ಲ ಸಾಕ್ಷಿಯು ಸದರಿ ಮೋಟರ ಸೈಕಲ ಬೇರೆ ಊರಿಗೆ ಹೋಗುವ ದಾರಿಯಿಂದ ಒಮ್ಮೆಲೆ ರಸ್ತೆಯ ತಪ್ಪು ಬದಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಬೇರೆ ಊರಿನ ದಾರಿ ರಸ್ತೆಯ ನನ್ನ ಬದಿಗೆ ಹೋಗುವ ದಾರಿ ಇತ್ತು. ನನ್ನ ಮೋಟರ ಸೈಕಲ್ಲನ್ನು ನಾನು ಮುಂದೆ ನೋಡಿ ಓಡಿಸುತ್ತಿದ್ದೆ ಎಂದರೆ ನಿಜ. ನಾನು ಅತಿ ವೇಗದಿಂದ ಹೋಗುತ್ತಿದ್ದರಿಂದ ನಿಯಂತ್ರಣ ಮಾಡಲು ಆಗದೆ ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ವಿಮೆ ಇರದೇ ಇರುವುದರಿಂದ ನನ್ನ ಮುಂದೆ ಹೋಗುತ್ತಿದ್ದ ವಾಹನದ ಮೇಲೆ ವಿಮೆಯ ಸಲುವಾಗಿ ಸುಳ್ಳು ಕೇಸ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಪೊಲೀಸರು ಸಲ್ಲಿಸಿದ ದೋಷಾರೋಪಣೆಯನ್ನು ನಾನು ಮೇಲಾಧಿಕಾರಿಗಳ ಮುಂದೆ ಪ್ರಶ್ನೆ ಮಾಡಿಲ್ಲ. ನನ್ನ ತಪ್ಪಿನಿಂದ ಅಪಘಾತ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಎದುರುಗಾರ ನಂ.1 ರ ಪರ ಶ್ರೀ ಎನ್. ಎಸ್.ಎಮ್. ವಕೀಲರಿಂದ:-**

ಔರಾದ ಬೀದರ ರಸ್ತೆ ರಾಷ್ಟ್ರೀಯ ಹೆದ್ದಾರಿ ಎಂದರೆ ನಿಜ.  ಮೋಟರ ಸೈಕಲ ನಂ. ಕೆ.ಎ.38 ಎಕ್ಸ 9434 ನೇದ್ದರ ವಾಹನ ನನ್ನ ವಾಹನಕ್ಕೆ ಟಚ್ ಆಗಿಲ್ಲ ಎಂದರೆ ಸರಿಯಲ್ಲ.  ಮೋಟರ ಸೈಕಲ ನಂ. ಕೆ.ಎ.38 ಎಕ್ಸ 9434 ಕ್ಕೆ ಯಾವುದೇ ಜಖಂ ಆಗಿಲ್ಲ

ಎಂದರೆ ಸರಿಯಲ್ಲ. ಪೊಲೀಸರ ಜೊತೆ ಶಾಮೀಲಾಗಿ  ಮೋಟರ ಸೈಕಲ ನಂ. ಕೆ.ಎ.38 ಎಕ್ಸ 9434 ನೇದ್ದರ ಮೇಲೆ ವಿಮೆ ಪಡೆಯುವ ಸಲುವಾಗಿ ಸುಳ್ಳು ಕೇಸ ಹಾಕಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ :**

(ನನ್ನ ಉಕ್ತ ಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ ಮೇಲೆ ಟೈಪ್/ಪ್ರಿಂಟ ಮಾಡಲಾಗಿದೆ ).

ಓ.ಹೇ.ಕೇ. ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಔರಾದ.